ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2409/2015

ಚಾಸಾ:3 ಪ್ರಾಸಾ:3

ದಿನಾಂಕ: 14.07.2025

| | | |
|---|---|---|
| ವಾಗ್ಮೂಲದವರ ಹೆಸರು | : | ಸಾವಿತ್ರಿ |
| ಗಂಡನ ಹೆಸರು | : | ನಾರಾಯಣ |
| ವಯಸ್ಸು | : | 75 ವರ್ಷ |
| ಉದ್ಯೋಗ | : | ಮನೆಯಲ್ಲಿ ಇರುವುದು |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ಚಾಸಾ-1 ಮತ್ತು 2 ನನ್ನ ತಂಗಿ. ಸುಮಾರು 8-10 ವರ್ಷಗಳ ಹಿಂದೆ ಚಾಸಾ-1 ರವರು ಹಾಲನ್ನು ತೆಗೆದುಕೊಂಡು ಬರುತ್ತಿದ್ದಾಗ ನಮ್ಮ ಅಜ್ಜಿ ಕಾಲದಿಂದ ನಡೆದು ಬರುತ್ತಿದ್ದ ದಾರಿಯಲ್ಲಿ ಆರೋಪಿತರ ಮನೆಯ ಕಂಪೌಂಡು ಹೊರಗೆ ಸದ್ರಿ ದಾರಿ ಇದ್ದು, ಆರೋಪಿತರು ಚಾಸಾ-1ರವರನ್ನು ತಡೆದು ದೂಡಿ ಆಕೆಗೆ ಹೊಡೆದಿರುತ್ತಾರೆ. ಕೂಗುವುದನ್ನು ಕೇಳಿ ನಾನು ಮತ್ತು ಚಾಸಾ-2ರವರು ಹೋಗಿರುತ್ತೇವೆ. ಆಗ ಆರೋಪಿತರು ಅವಾಚ್ಯವಾಗಿ ಬೈದಿರುತ್ತಾರೆ. ಜೀವ ಬೆದರಿಕೆ ಹಾಕಿರುತ್ತಾರೆ. ಅನಂತರ ನಾವು ಚಾಸಾ-1ರವರನ್ನು ಕರೆದುಕೊಂಡು ಆಸ್ಪತ್ರೆಗೆ ದಾಖಲಿಸಿರುತ್ತೇವೆ. ಈಗ ಯಾವುದೇ ತೊಂದರೆ ನೀಡುತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿರುತ್ತಾರೆ.

ಸಾಕ್ಷಿ ಮುಮಾ1ನ್ನು ಚಾಸಾ-1ರವರು ಧರಿಸಿದ್ದರು. ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆರೋಪಿತರನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 2ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಭಾಗಶಃ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ವಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:</u>**

ದಿ: 10-02-2015 ರಂದು ಚಾಸಾ-1ರವರು ಹಾಲನ್ನು ತರುತ್ತಿದ್ದಾಗ ಆರೋಪಿತರು ಸೇರಿ ಚಾಸಾ-4 ರವರಿಗೆ ಹಲ್ಲೆ ಮಾಡುತ್ತಿದ್ದರು ಎಂದರೆ ಸರಿ. ಆಗ ಚಾಸಾ-2 ರವರು ತಡೆಯಲು ಹೋದಾಗ ಆಕೆಯ ಭುಜಕ್ಕೆ ಕೈ ಹಾಕಿ ಹೊಡೆದಿರುತ್ತಾರೆ ಎಂದರೆ ಸರಿ. ಆಗ ಚಾಸಾ-2 ರವರ ನೈಟಿ ಹರಿದು ಹೋಗಿದ್ದು ಅದು ಮುಮಾ1 ಅಗಿರುತ್ತದೆ ಎಂದರೆ ನನಗೆ ನೆನಪಿಲ್ಲ. ಉಳಿದವರು ಬರುವುದನ್ನು

ನೋಡಿ ಆರೋಪಿತರು ಬಿಟ್ಟು ಹೋಗಿರುತ್ತಾರೆ ಎಂದರೆ ಸರಿ. ಚಾಸಾ-1ರವರ ಮಾನಕ್ಕೆ ಕುಂದು ಉಂಟು ಮಾಡಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದಃ</u>**

ಆರೋಪಿತರು ನನ್ನನ್ನು ಹೊಡೆದಿಲ್ಲ. ಘಟನೆಯಾಗುವಾಗ ನಾನು ಮನೆಯಲ್ಲಿ ಇದ್ದೆ. ಏಕಾಏಕಿ ಗಲಾಟೆಯಾಗಿರುತ್ತದೆ. ಚಾಸಾ-1ರವರು ಕೂಗುವುದನ್ನು ಕೇಳಿ ನಾನು ಹೋಗಿರುತ್ತೇನೆ. ನಾನು ಹೋದಾಗ ಚಾಸಾ-1ರವರು ಕೆಳಗೆ ಬಿದ್ದಿದ್ದರು. ಆಗ ಆರೋಪಿತರು 3 ಜನ ಇದ್ದರು. ನಾನು ಸ್ಥಳದಲ್ಲಿ ಕೋಲನ್ನು ನೋಡಿಲ್ಲ. ನಾವು ಬರುವುದನ್ನು ನೋಡಿ ಆರೋಪಿತರು ಹೊರಟು ಹೋಗಿರುತ್ತಾರೆ. ಚಾಸಾ-1 ರವರ ಕೈ ಮತ್ತು ಕಾಲಿಗೆ ರಕ್ತಗಾಯವಾಗಿರುತ್ತದೆ. ಚಾಸಾ-1ರವರು ಧರಿಸಿದ್ದ ನೈಟಿಗೆ ರಕ್ತ ತಾಗಿತ್ತಾ ಎಂದು ನನಗೆ ತಿಳಿದಿಲ್ಲ. ಆರೋಪಿತರು ನನ್ನ ವಿರುದ್ದ 2-3 ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಸುಮಾರು 10-12 ವರ್ಷಗಳಿಂದ ದಾರಿ ತಕರಾರು ಇರುತ್ತದೆ.

ಸದ್ರಿ ದಾರಿ ಇರುವ ಜಾಗವನ್ನು 2ನೇ ಆರೋಪಿಯ ತಂದೆ ಖರೀದಿಸಿರುತ್ತಾರೆ. ದಾರಿಯ ಬಗ್ಗೆ ಸಿವಿಲ್ ಪ್ರಕರಣ ಇರಬಹುದು ನನಗೆ ಗೊತ್ತಿಲ್ಲ. ಚಾಸಾ-1 ರವರಿಗೆ ಹೊಡೆದು ಬಡಿದು, ಬೈದು ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಚಾಸಾ-4 ರವರ ಊರು ಎಲ್ಲಿ ಎಂದು ನನಗೆ ಗೊತ್ತಿಲ್ಲ. ಆರೋಪಿತರು ಚಾಸಾ-4 ರವರಿಗೆ ಹೊಡೆದು ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಸದ್ರಿ ದಿನ ಚಾಸಾ-4 ರವರಿಗೆ ಯಾರು ಎಷ್ಟು ಹೊಡೆದರು ಎಂದು ನನಗೆ ಹೇಳಲಾಗುವುದಿಲ್ಲ. ನಾನು ಚಾಸಾ-1ರವರ ಕಡೆಗೆ ಗಮನ ಹರಿಸಿರುತ್ತೇನೆ. ಚಾಸಾ-1ರವರು ಪ್ರಜ್ಞೆ ತಪ್ಪಿದ್ದರು.

ಚಾಸಾ-1ರವರೇ ದೂರನ್ನು ನೀಡಿರುತ್ತಾರೆ. ಪೊಲೀಸರು ನನ್ನ ಹೇಳಿಕೆಯಲ್ಲಿ ಏನು ಬರೆದುಕೊಂಡಿದ್ದಾರೆ ಎಂದು ನನಗೆ ತಿಳಿದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**